ನುಡಿಯ ಮೂಲಕ ಕಟ್ಟುತ್ತಿದ್ದೇವೆ ಅನ್ನುವ ಎಚ್ಚರ, ಹೊಣೆಗಾರಿಕೆ ಬಂದಾಗ ರೂಪುಗೊಳ್ಳುವ ಸಾಹಿತ್ಯಕ್ಕೆ ಅಪಾರವಾದ ಶಕ್ತಿಯು ಇರುತ್ತದೆ. ನೀವು ಎಮೋಜಿ ಅಂದಿರಲ್ಲ, ಅದು ಭಾವಗಳನ್ನು ಸಾಯಿಸುವ ತಂತ್ರಜ್ಞಾನದ ಪರಿಣಾಮವೇ ಅಲ್ಲವೇ? ಥಟ್ಟನೊಂದು ಎಮೋಜಿ ಒತ್ತುವ ಮೂಲಕ ಭಾವದ, ಸ್ಪಂದನೆಯ ಜವಾಬ್ದಾರಿಯನ್ನೂ ಕಳಕೊಳ್ಳುತ್ತೇವೆ–ಇದು ಹಳಹಳಿಕೆಯೂ ಇರಬಹುದು, ಎಮೋಜಿಗಳದ್ದೇ ಭಾಷೆ ಸೃಷ್ಟಿಯಾಗುತ್ತದೆ ಅನ್ನುವ ಅಪನಂಬಿಕೆಯೂ ಇರಬಹುದು!

◆ **ಪಠ್ಯಗಳ ಒಳಸಂಬಂಧವನ್ನು ಅರಿಯುವ ವಿಧಾನವನ್ನು 'ಬಸವ ವಚನ ವಾಚಿಕೆ'ಯಲ್ಲಿ ಸಶಕ್ತವಾಗಿ ಪ್ರಯೋಗ ಮಾಡಿ, ಯಶಸ್ವಿಯಾಗಿದ್ದೀರಿ. ಇದು ಕಿರಿಯರಾದ ನಮಗೆ ನಡೆಯಲು ಮಾಡಿಕೊಟ್ಟಿರುವ ಹಾದಿಯೆ?**

ಹಾಗೆ ಅಪ್ಪಣೆ ಕೊಡಿಸುವ ಸ್ವಭಾವ ನನ್ನದಲ್ಲ. ಒಬ್ಬೊಬ್ಬ ಓದುಗನೂ ತನಗೆ ಬೇಕಾದ ಓದಿನ ವಲಯವನ್ನು ತಾನೇ ಸ್ಥಾಪಿಸಿಕೊಳ್ಳಬೇಕು. ನನ್ನ ಆಯ್ಕೆಯನ್ನು ನನ್ನ ಅನುವಾದ, ವಿಮರ್ಶೆಯ ಬರಹಗಳ ಮೂಲಕ ಸೂಚಿಸಿದ್ದೇನೆ. ವ್ಯಕ್ತಿಗಳು ಅಕಸ್ಮಾತ್ ನಮಗೆ ಎದುರಾಗಿ, ಮನಸಿಗೆ ಹತ್ತಿರವಾಗುತ್ತಾರೆ ಅನಿಸಿ, ಮತ್ತೆ ಮತ್ತೆ ಅವರನ್ನು ಭೇಟಿಯಾಗುತ್ತ ಆಪ್ತತೆ ಬೆಳೆಯುತ್ತದಲ್ಲ, ಅರ್ಥವಾಗುತ್ತದಲ್ಲ, ಹಾಗೆ ಸಾಹಿತ್ಯ ಕೃತಿಗಳೂ ಆಪ್ತವಾಗಬೇಕು. ಓದುಗರಾದ ನಮ್ಮ ಮನಸಿನಲ್ಲಿ ಹಲವು ಪಠ್ಯಗಳ, ಒಬ್ಬರೇ ಲೇಖಕರ ಹಲವು ಕೃತಿಗಳ ನಡುವಿನ ಸಂಭಾಷಣೆ ಕೇಳಿಸಿಕೊಳ್ಳುತ್ತ, ಆ ಕೃತಿ ಸಂವಾದವನ್ನೇ ವಿಮರ್ಶೆಗೆ ಬಳಸಿಕೊಳ್ಳಬೇಕು ಅನ್ನುವುದು ನನ್ನ ನಂಬಿಕೆ.

◆ **ಇಂದಿಗೆ ಬಹಳಷ್ಟು ಜನರು ಓದಲು ಸಮಯವಿಲ್ಲವೆಂಬ ದೊಡ್ಡದೊಂದು ಕಾರಣವನ್ನು ಕೃತಿಗಳಿಂದ ವಿಮುಖರಾಗಲು ಇಟ್ಟುಕೊಂಡಿದ್ದಾರೆ. ಇದನ್ನು ಹೇಗೆ ವಿವರಿಸುವುದು?**

ಅಷ್ಟು ಸಮಯವಿಲ್ಲ, ಓದಲು ಪುರಸೊತ್ತು ಇಲ್ಲ, ಟೈಮ್ ವೇಸ್ಟು ಇಂಥ ಮಾತುಗಳೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅ-ಮಾನವೀಯವಾದವು. ಎದುರಿಗೆ ಇರುವುದು ಇನ್ನೊಂದು ಜೀವ ಅನ್ನುವ ಅರಿವು ಇದ್ದಾಗ ಸಮಯ ವ್ಯರ್ಥ, ಉಪಯೋಗವೇನು ಇಂಥ ಪ್ರಶ್ನೆಗಳು ಬರುವುದೇ ಇಲ್ಲ. ಮನುಷ್ಯರಲ್ಲಿ ಆಸಕ್ತಿ, ಪ್ರೀತಿ ಇದ್ದರೆ ಮನುಷ್ಯರು ಮಾಡುವ ನಿರ್ಮಾಣಗಳಲ್ಲೂ ಆಸಕ್ತಿ, ಪ್ರೀತಿ ಇರಬೇಕು, ಜೊತೆಗೆ ವಿಮರ್ಶೆಯೂ ಬೇಕು.

◆ **ಇಂದಿನ ವೈವಿಧ್ಯಮಯ ಬರಹಗಾರರನ್ನು ಕಂಡರೆ ನಿಮಗೆ ಏನನಿಸುತ್ತದೆ ? ಒಂದು ಕಾಲದಲ್ಲಿ ಒಂದು ಉದ್ದೇಶ ಇಟ್ಟುಕೊಂಡು ರಚಿಸಿದವರನ್ನು ಕಂಡವರು ನೀವು, ಇಂದು ವೈವಿಧ್ಯವೇ ಪ್ರಧಾನವಾಗಿದೆ. ಆ ಕಾರಣದಿಂದ ಈ ಮಾತನ್ನು ಕೇಳುತ್ತಿದ್ದೇನೆ.**

ಯಾವ ಓದುಗರಿಗೇ ಆಗಲಿ ಒಬ್ಬರೋ, ಇಬ್ಬರೋ, ಒಂದೋ ಎರಡೋ ಬಹಳ ಮುಖ್ಯ ಲೇಖಕರು, ಕೃತಿಗಳು ಇರುವುದಿಲ್ಲ. ಪ್ರಾಮುಖ್ಯ ನಮ್ಮ ಬದುಕಿನುದ್ದಕ್ಕೂ ಬದಲಾಗುತ್ತಲೇ ಇರುತ್ತದೆ. ನನ್ನ ವಯಸ್ಸಿನ ಕವಿಗಳಲ್ಲಿ ರಾಮು, ಶಿವಪ್ರಕಾಶ್, ಸವಿತಾ ನಾಗಭೂಷಣ; ಸ್ವಲ್ಪ ಕಿರಿಯರಲ್ಲಿ ಜೀವಯಾನ ಮಂಜುನಾಥ್, ತೇಜಶ್ರೀ



ಚಿತ್ರ: ಅನೂಪ್ ರಾಘ್ ಟಿ.